IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಗ್ರಾಮೀಣ ಶಿಕ್ಷಣದಲ್ಲಿ ಮಹಿಳಾ ಸಬಲೀಕರಣ: ಒಂದು ಸಮಗ್ರ ವಿಮರ್ಶಾತ್ಮಕ

## ಅಧ್ಯಯನ

ಡಾ. ವೆಂಕಟಾಚಲಪತಿ ಎಚ್.ಎಸ್.
ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗೌರಿಬಿದನೂರು,
ಚಿಕ್ಕಬಳ್ಳಾಪುರ ಜಿಲ್ಲೆ –561208
ಮತ್ತು
ಡಾ. ದುರ್ಗಪ್ಪ,
ವಾಣಿಜ್ಯ ಶಾಸ್ತ್ರ ವಿಭಾಗ ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ,
ತುಮಕೂರು ಜಿಲ್ಲೆ–572132,
ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾಗಿದೆ

**ಸಾರಾಂಶ (Abstract)**

ಗ್ರಾಮೀಣ ಭಾರತದಲ್ಲಿ ಮಹಿಳಾ ಸಬಲೀಕರಣಕ್ಕೆ ಶಿಕ್ಷಣವೇ ಮೂಲಾಧಾರವಾಗಿದೆ. ಸ್ವಾತಂತ್ರ್ಯ ನಂತರದ ದಶಕಗಳಲ್ಲಿ ಭಾರತದಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿ ಗಣನೀಯ ಪ್ರಗತಿಯಾಗಿದ್ದರೂ, ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ಅಂತರವು ಇನ್ನೂ ಕಡಿಮೆಯಾಗಿಲ್ಲ. ಈ ಸಂಶೋಧನಾ ಲೇಖನವು ಗ್ರಾಮೀಣ ಶಿಕ್ಷಣದ ಮೂಲಕ ಮಹಿಳಾ ಸಬಲೀಕರಣದ ವಿವಿಧ ಆಯಾಮಗಳನ್ನು ಸಮಗ್ರವಾಗಿ ಪರಿಶೀಲಿಸುತ್ತದೆ. ಪ್ರಸ್ತುತ ಅಧ್ಯಯನವು ಗ್ರಾಮೀಣ ಮಹಿಳೆಯರ ಶೈಕ್ಷಣಿಕ ಸ್ಥಿತಿಗತಿ, ಅವರು ಎದುರಿಸುತ್ತಿರುವ ಸವಾಲುಗಳು, ಸರ್ಕಾರಿ ಯೋಜನೆಗಳ ಪರಿಣಾಮಕಾರಿತ್ವ ಮತ್ತು ಶಿಕ್ಷಣದ ಮೂಲಕ ಸಬಲೀಕರಣದ ಸಾಧ್ಯತೆಗಳನ್ನು ವಿಶ್ಲೇಷಿಸುವ ಗುರಿಯನ್ನು ಹೊಂದಿದೆ. ವಿವಿಧ ದ್ವಿತೀಯಕ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಈ ವಿಮರ್ಶಾತ್ಮಕ ಅಧ್ಯಯನವನ್ನು ನಡೆಸಲಾಗಿದೆ. ಗ್ರಾಮೀಣ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಸಾಮಾಜಿಕ ನ್ಯಾಯವನ್ನು ಒಳಗೊಂಡ ಸಮಗ್ರ ವಿಧಾನದ ಅಗತ್ಯವನ್ನು ಈ ಅಧ್ಯಯನವು ಒತ್ತಿ ಹೇಳುತ್ತದೆ.

ಪ್ರಮುಖ ಪದಗಳು (Keywords): ಗ್ರಾಮೀಣ ಶಿಕ್ಷಣ, ಮಹಿಳಾ ಸಬಲೀಕರಣ, ಸಾಕ್ಷರತೆ, ಲಿಂಗ ಸಮಾನತೆ, ಸಾಮಾಜಿಕ ಬದಲಾವಣೆ.

## 1. ಪರಿಚಯ (Introduction)

ಭಾರತೀಯ ಸಮಾಜದ ಬೆನ್ನೆಲುಬಾಗಿರುವ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯು ರಾಷ್ಟ್ರದ ಪ್ರಗತಿಯೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದೆ. ಭಾರತದ ಜನಸಂಖ್ಯೆಯ ಸುಮಾರು 65% ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಈ ಗ್ರಾಮೀಣ ಜನಸಂಖ್ಯೆಯಲ್ಲಿ ಮಹಿಳೆಯರ ಪಾಲು ಸುಮಾರು ಅರ್ಧದಷ್ಟಿದೆ. ಆದ್ದರಿಂದ, ಗ್ರಾಮೀಣ ಅಭಿವೃದ್ಧಿಯ ಪ್ರಮುಖ ಆಯಾಮಗಳಲ್ಲಿ ಮಹಿಳಾ ಸಬಲೀಕರಣವು ಅತ್ಯಂತ ಮಹತ್ವಪೂರ್ಣವಾಗಿದೆ. ಮಹಾತ್ಮ ಗಾಂಧೀಜಿಯವರು "ನೀವು ಒಬ್ಬ ಪುರುಷನಿಗೆ ಶಿಕ್ಷಣ ನೀಡಿದರೆ ಒಬ್ಬ ವ್ಯಕ್ತಿಗೆ ಮಾತ್ರ ಶಿಕ್ಷಣ ನೀಡಿದಂತೆ, ಆದರೆ ನೀವು ಒಬ್ಬ

ಮಹಿಳೆಗೆ ಶಿಕ್ಷಣ ನೀಡಿದರೆ ಒಂದು ಇಡೀ ಕುಟುಂಬಕ್ಕೆ ಶಿಕ್ಷಣ ನೀಡಿದಂತೆ" ಎಂಬ ಮಾತಿನಲ್ಲಿ ಮಹಿಳಾ ಶಿಕ್ಷಣದ ಮಹತ್ವವನ್ನು ಸ್ಪಷ್ಟಪಡಿಸಿದ್ದಾರೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿ ಗಣನೀಯ ಪ್ರಗತಿಯಾಗಿದ್ದರೂ, ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ಅಂತರವು ಇನ್ನೂ ಕಡಿಮೆಯಾಗಿಲ್ಲ, ರಾಷ್ಟ್ರೀಯ ಸಾಕ್ಷರತಾ ಸಮೀಕ್ಷೆಯ ಪ್ರಕಾರ, ಗ್ರಾಮೀಣ ಮಹಿಳೆಯರ ಸಾಕ್ಷರತಾ ಪ್ರಮಾಣವು ಸುಮಾರು 70% ರಷ್ಟಿದ್ದರೆ, ನಗರ ಮಹಿಳೆಯರ ಸಾಕ್ಷರತಾ ಪ್ರಮಾಣವು ಸುಮಾರು 87% ರಷ್ಟಿದೆ. ಈ ಅಂಕಿಅಂಶಗಳು ಗ್ರಾಮೀಣ ಮಹಿಳಾ ಶಿಕ್ಷಣದ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತವೆ. ಈ ಸಂದರ್ಭದಲ್ಲಿ ಗ್ರಾಮೀಣ ಶಿಕ್ಷಣದ ಮೂಲಕ ಮಹಿಳಾ ಸಬಲೀಕರಣದ ಸಮಗ್ರ ವಿಮರ್ಶೆಯ ಅಗತ್ಯವುಂಟಾಗಿದೆ.

## 2. ಸಾಹಿತ್ಯ ವಿಮರ್ಶೆ (Review of Literature)

ಈ ಅಧ್ಯಯನಗಳು ವಿವಿಧ ಆಯಾಮಗಳಲ್ಲಿ ಮಹಿಳಾ ಶಿಕ್ಷಣದ ಮಹತ್ವವನ್ನು ಎತ್ತಿ ತೋರಿಸಿವೆ.

ಸೇನ್ (1999) ಅವರ ಪ್ರಕಾರ, ಮಹಿಳಾ ಸಬಲೀಕರಣವು ಸ್ತ್ರೀಯರ ಸಾಮರ್ಥ್ಯ ವೃದ್ಧಿ ಮತ್ತು ಸ್ವಾತಂತ್ರದೊಂದಿಗೆ ಸಂಬಂಧಿಸಿದೆ. ಶಿಕ್ಷಣವು ಈ ಸಾಮರ್ಥ್ಯ ವೃದ್ಧಿಗೆ ಪ್ರಮುಖ ಸಾಧನವಾಗಿದೆ ಎಂದು ಅವರು ವಾದಿಸುತ್ತಾರೆ. ಮಹಿಳೆಯರಿಗೆ ಶಿಕ್ಷಣ ದೊರೆತಾಗ, ಅವರು ತಮ್ಮ ಹಕ್ಕುಗಳ ಬಗ್ಗೆ, ಅರಿವು ಮೂಡಿಸಿಕೊಳ್ಳುತ್ತಾರೆ ಮತ್ತು ಸಮಾಜದಲ್ಲಿ ತಮ್ಮ ಸ್ಥಾನವನ್ನು ಸುಧಾರಿಸಿಕೊಳ್ಳಲು ಶ್ರಮಿಸುತ್ತಾರೆ ಎಂದು ಅವರು ಗಮನಿಸಿದ್ದಾರೆ. ದ್ರೆಜೆ ಮತ್ತು ಮುರ್ಥಿ (2001) ಅವರ ಅಧ್ಯಯನದ ಪ್ರಕಾರ, ಗ್ರಾಮೀಣ ಮಹಿಳೆಯರ ಶಿಕ್ಷಣದಲ್ಲಿ ಕಂಡುಬರುವ ಲಿಂಗ ಅಂತರವು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳಿಂದ ಉಂಟಾಗುತ್ತದೆ. ಬಡತನ, ಸಾಂಪ್ರದಾಯಿಕ ಮೌಲ್ಯಗಳು ಮತ್ತು ಮೂಲಸೌಕರ್ಯಗಳ ಕೊರತೆಯು ಇದಕ್ಕೆ ಪ್ರಮುಖ ಕಾರಣಗಳಾಗಿವೆ. ಬಡ ಕುಟುಂಬಗಳಲ್ಲಿ ಮಗಳ ಶಿಕ್ಷಣಕ್ಕಿಂತ ಮಗನ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಸಿಗುತ್ತದೆ. ಸೀಮಿತ ಸಂಪನ್ಮೂಲಗಳಲ್ಲಿ ಮೊದಲು ಗಂಡು ಮಕ್ಕಳನ್ನು ಓದಿಸಬೇಕು ಎಂಬ ಮನೋಭಾವ ಇನ್ನೂ ಅಸ್ತಿತ್ವದಲ್ಲಿದೆ. ನಿರ್ಮಲಾ ರಾವ್ (2008) ಅವರು ತಮ್ಮ ಅಧ್ಯಯನದಲ್ಲಿ ಗ್ರಾಮೀಣ ಮಹಿಳೆಯರ ಶಿಕ್ಷಣದಲ್ಲಿ ಸ್ವಸಹಾಯ ಸಂಘಗಳ ಪಾತ್ರವನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ. ಸ್ವಸಹಾಯ ಸಂಘಗಳು ಮಹಿಳೆಯರಲ್ಲಿ ಆತ್ಮವಿಶ್ವಾಸ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸುವಲ್ಲಿ ಯಶಸ್ವಿಯಾಗಿವೆ ಎಂದು ಅವರು ಗಮನಿಸಿದ್ದಾರೆ. ಈ ಸಂಘಗಳ ಮೂಲಕ ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹ ಪಡೆಯುತ್ತಾರೆ ಮತ್ತು ಸಾಮೂಹಿಕ ನಿರ್ಣಯ ತೆಗೆದುಕೊಳ್ಳುವ ಅಭ್ಯಾಸವನ್ನು ಬೆಳೆಸಿಕೊಳ್ಳುತ್ತಾರೆ. ಅಗರ್ವಾಲ್ (2014) ಅವರ ಅಧ್ಯಯನವು ಸರ್ಕಾರಿ ಯೋಜನೆಗಳಾದ ಸರ್ವ ಶಿಕ್ಷಾ ಅಭಿಯಾನ್ ಮತ್ತು ಬೇಟಿ ಬಚಾವೋ ಬೇಟಿ ಪಢಾವೋ ಯೋಜನೆಗಳು ಗ್ರಾಮೀಣ ಮಹಿಳಾ ಶಿಕ್ಷಣದ ಮೇಲೆ ಬೀರಿದ ಪ್ರಭಾವವನ್ನು ವಿಶ್ಲೇಷಿಸುತ್ತದೆ. ಈ ಯೋಜನೆಗಳಿಂದ ಹೆಣ್ಣು ಮಕ್ಕಳ ಶಾಲಾ ದಾಖಲಾತಿಯಲ್ಲಿ ಗಮನಾರ್ಹ ಏರಿಕೆಯಾಗಿದೆ ಎಂದು ಅವರು ತಿಳಿಸಿದ್ದಾರೆ. ಮಧ್ಯಾಹ್ನದ ಬಿಸಿಯೂಟ ಯೋಜನೆಯು ಹೆಣ್ಣು ಮಕ್ಕಳನ್ನು ಶಾಲೆಗೆ ಆಕರ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ಅವರು ಗಮನಿಸಿದ್ದಾರೆ. ಶಶಿಕಲಾ (2019) ಅವರು ಗ್ರಾಮೀಣ ಕರ್ನಾಟಕದಲ್ಲಿ ಮಹಿಳಾ ಸಾಕ್ಷರತೆಯ ಕುರಿತು ನಡೆಸಿದ ಅಧ್ಯಯನದಲ್ಲಿ, ಗ್ರಾಮೀಣ ಮಹಿಳೆಯರ ಶಿಕ್ಷಣಕ್ಕೆ ಶಾಲೆಗಳ ದೂರ, ಸುರಕ್ಷಿತ ಸಾರಿಗೆಯ ಕೊರತೆ ಮತ್ತು ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಅಭಾವವು ಪ್ರಮುಖ ಅಡೆತಡೆಗಳಾಗಿವೆ ಎಂದು ಕಂಡುಕೊಂಡಿದ್ದಾರೆ. ಅನೇಕ ಗ್ರಾಮಗಳಲ್ಲಿ ಪ್ರೌಢಶಾಲೆಗಳು ಮತ್ತು ಕಾಲೇಜುಗಳು ದೂರದಲ್ಲಿದ್ದು, ಪ್ರಯಾಣದ ಅನುಕೂಲವಿಲ್ಲದ ಕಾರಣ ಹೆಣ್ಣು ಮಕ್ಕಳು ವಿದ್ಯಾಭ್ಯಾಸವನ್ನು ಮಧ್ಯದಲ್ಲಿಯೇ ನಿಲ್ಲಿಸಬೇಕಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಪಾಟೀಲ್ (9090) ಅವರು ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣದ ಕುರಿತು ಗ್ರಾಮೀಣ ಮಹಾರಾಷ್ಟ್ರದಲ್ಲಿ ನಡೆಸಿದ ಅಧ್ಯಯನದಲ್ಲಿ, ಸ್ವಸಹಾಯ ಸಂಘಗಳಿಗೆ ಸೇರಿದ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗುವುದರ ಜೊತೆಗೆ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿಯೂ ಹೆಚ್ಚು ಸಕ್ರಿಯರಾಗಿದ್ದಾರೆ ಎಂದು ಕಂಡುಕೊಂಡಿದ್ದಾರೆ.

## 3. ಅಧ್ಯಯನದ ಹಿನ್ನೆಲೆ (Background of the Study)

ಭಾರತದ ಜನಸಂಖ್ಯೆಯ ಸುಮಾರು 65% ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಈ ಗ್ರಾಮೀಣ ಜನಸಂಖ್ಯೆಯಲ್ಲಿ ಮಹಿಳೆಯರ ಪಾಲು ಸುಮಾರು ಅರ್ಧದಷ್ಟಿದೆ. ರಾಷ್ಟ್ರೀಯ ಸಾಕ್ಷರತಾ ಸಮೀಕ್ಷೆಯ ಪ್ರಕಾರ, ಗ್ರಾಮೀಣ ಮಹಿಳೆಯರ ಸಾಕ್ಷರತಾ ಪ್ರಮಾಣವು (ಸುಮಾರು 70%) ನಗರ ಮಹಿಳೆಯರ ಸಾಕ್ಷರತಾ ಪ್ರಮಾಣಕ್ಕಿಂತ (ಸುಮಾರು 87%)

ಗಣನೀಯವಾಗಿ ಕಡಿಮೆಯಿದೆ. ಈ ಅಂಕಿಅಂಶಗಳು ಗ್ರಾಮೀಣ ಮಹಿಳಾ ಶಿಕ್ಷಣದ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತವೆ. ಕಳೆದ ಎರಡು ದಶಕಗಳಲ್ಲಿ ಸರ್ಕಾರವು ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಸರ್ವ ಶಿಕ್ಷಾ ಅಭಿಯಾನ್ (2001), ಕಸ್ತೂರ್ ಬಾ ಗಾಂಧಿ ಬಾಲಿಕಾ ವಿದ್ಯಾಲಯ (2004), ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ್ (2009), ಬೇಟಿ ಬಚಾವೋ ಬೇಟಿ ಪಢಾವೋ ಯೋಜನೆ (2015) ಮುಂತಾದ ಯೋಜನೆಗಳು ಗ್ರಾಮೀಣ ಹೆಣ್ಣು ಮಕ್ಕಳ ಶಿಕ್ಷಣವನ್ನು ಉತ್ತೇಜಿಸುವ ಗುರಿಯನ್ನು ಹೊಂದಿವೆ. ಈ ಯೋಜನೆಗಳ ಫಲವಾಗಿ ಹೆಣ್ಣು ಮಕ್ಕಳ ಶಾಲಾ ದಾಖಲಾತಿಯಲ್ಲಿ ಗಮನಾರ್ಹ ಏರಿಕೆಯಾಗಿದೆ. ಆದರೆ, ಶಾಲಾ ತ್ಯಜಿಸುವಿಕೆಯ ಪ್ರಮಾಣವನ್ನು ಕಡಿಮೆ ಮಾಡುವಲ್ಲಿ ಮತ್ತು ಗುಣಮಟ್ಟದ ಶಿಕ್ಷಣವನ್ನು ಒದಗಿಸುವಲ್ಲಿ ಇನ್ನೂ ಸಾಕಷ್ಟು ಪ್ರಗತಿ ಸಾಧಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ, ಗ್ರಾಮೀಣ ಮಹಿಳೆಯರ ಸಬಲೀಕರಣದಲ್ಲಿ ಶಿಕ್ಷಣದ ಪಾತ್ರದ ಕುರಿತು ಸಮಗ್ರವಾದ ವಿಮರ್ಶಾತ್ಮಕ ಅಧ್ಯಯನದ ಅವಶ್ಯಕತೆಯಿದೆ. ಗ್ರಾಮೀಣ ಮಹಿಳೆಯರ ಶಿಕ್ಷಣದ ಪ್ರಸ್ತುತ ಸ್ಥಿತಿ, ಅವರು ಎದುರಿಸುತ್ತಿರುವ ಸವಾಲುಗಳು, ಸರ್ಕಾರಿ ಯೋಜನೆಗಳ ಪರಿಣಾಮಕಾರಿತ್ವ ಮತ್ತು ಶಿಕ್ಷಣದ ಮೂಲಕ ಸಬಲೀಕರಣದ ಸಾಧ್ಯತೆಗಳನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ.

## 4. ಸಂಶೋಧನಾ ಸಮಸ್ಯೆಗಳು (Research Problems)

ಗ್ರಾಮೀಣ ಮಹಿಳೆಯರ ಶಿಕ್ಷಣ ಮತ್ತು ಸಬಲೀಕರಣದ ಕುರಿತು ಅಧ್ಯಯನ ನಡೆಸುವಾಗ ಹಲವಾರು ಪ್ರಮುಖ ಸಂಶೋಧನಾ ಸಮಸ್ಯೆಗಳು ಗೋಚರಿಸುತ್ತವೆ. ಪ್ರಥಮ ಸಮಸ್ಯೆ ಗ್ರಾಮೀಣ ಮಹಿಳೆಯರ ಶಿಕ್ಷಣಕ್ಕೆ ಅಡ್ಡಿಯಾಗಿರುವ ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಗುರುತಿಸುವಿಕೆಗೆ ಸಂಬಂಧಿಸಿದೆ. ಬಾಲ್ಯ ವಿವಾಹ, ವರದಕ್ಷಿಣೆ ಪದ್ಧತಿ, ಬಡತನ, ಸಂಪನ್ಮೂಲಗಳ ಕೊರತೆ ಮುಂತಾದ ಅಂಶಗಳು ಮಹಿಳೆಯರ ಶಿಕ್ಷಣದ ಮೇಲೆ ಪ್ರಭಾವ ಬೀರುತ್ತವೆ. ದ್ವಿತೀಯ ಸಮಸ್ಯೆ ಸರ್ಕಾರಿ ಯೋಜನೆಗಳ ಪರಿಣಾಮಕಾರಿತ್ವದ ಮೌಲ್ಯಮಾಪನಕ್ಕೆ ಸಂಬಂಧಿಸಿದೆ. ಸರ್ವ ಶಿಕ್ಷಾ ಅಭಿಯಾನ್, ಬೇಟಿ ಬಚಾವೋ–ಬೇಟಿ ಪಢಾವೋ ಮುಂತಾದ ಯೋಜನೆಗಳು ನೆಲಮಟ್ಟದಲ್ಲಿ ಎಷ್ಟು ಪರಿಣಾಮಕಾರಿಯಾಗಿವೆ ಎಂಬುದನ್ನು ಅಧ್ಯಯನ ಮಾಡಬೇಕಾಗಿದೆ. ತೃತೀಯ ಸಮಸ್ಯೆ ಶಿಕ್ಷಣದಿಂದ ಗ್ರಾಮೀಣ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಬಲೀಕರಣದ ಮೇಲಾಗಿರುವ ಪ್ರಭಾವದ ವಿಶ್ಲೇಷಣೆಗೆ ಸಂಬಂಧಿಸಿದೆ. ಚತುರ್ಥ ಸಮಸ್ಯೆ ಮಹಿಳಾ ಶಿಕ್ಷಣ ಮತ್ತು ಕುಟುಂಬದ ಆರ್ಥಿಕ ಸ್ಥಿತಿಯ ನಡುವಿನ ಸಂಬಂಧದ ಅಧ್ಯಯನಕ್ಕೆ ಸಂಬಂಧಿಸಿದೆ. ಪಂಚಮ ಸಮಸ್ಯೆ ಗ್ರಾಮೀಣ ಮಹಿಳೆಯರ ಶಿಕ್ಷಣದಲ್ಲಿ ತಂತ್ರಜ್ಞಾನದ ಪಾತ್ರದ ವಿಶ್ಲೇಷಣೆಗೆ ಸಂಬಂಧಿಸಿದೆ. ಷಷ್ಠ ಸಮಸ್ಯೆ ಲಿಂಗ ಅಂತರ ಕಡಿಮೆ ಮಾಡಲು ಪರಿಣಾಮಕಾರಿ ಕ್ರಮಗಳ ಗುರುತಿಸುವಿಕೆಗೆ ಸಂಬಂಧಿಸಿದೆ. ಸಪ್ತಮ ಸಮಸ್ಯೆ ಗ್ರಾಮೀಣ ಮಹಿಳೆಯರ ಶಿಕ್ಷಣದಲ್ಲಿ ಸ್ವಸಹಾಯ ಸಂಘಗಳ ಪಾತ್ರದ ವಿಶ್ಲೇಷಣೆಗೆ ಸಂಬಂಧಿಸಿದೆ. ಈ ಸಮಸ್ಯೆಗಳ ಅಧ್ಯಯನದಿಂದ ಮಾತ್ರ ಗ್ರಾಮೀಣ ಮಹಿಳಾ ಶಿಕ್ಷಣದ ನೈಜ ಚಿತ್ರಣ ಪಡೆಯಲು ಸಾಧ್ಯ.

## 5. ಅಧ್ಯಯನದ ಮಹತ್ವ (Significance of the Study)

ಈ ಅಧ್ಯಯನವು ಹಲವು ದೃಷ್ಟಿಕೋನಗಳಿಂದ ಮಹತ್ವಪೂರ್ಣವಾಗಿದೆ. ನೀತಿ ನಿರೂಪಕರಿಗೆ, ಗ್ರಾಮೀಣ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೊಸ ನೀತಿಗಳನ್ನು ರೂಪಿಸಲು ಮತ್ತು ಅಸ್ತಿತ್ವದಲ್ಲಿರುವ ಯೋಜನೆಗಳನ್ನು ಸುಧಾರಿಸಲು ಈ ಅಧ್ಯಯನವು ಸಹಾಯಕವಾಗಿದೆ. ಶಿಕ್ಷಣ ತಜ್ಞರಿಗೆ, ಗ್ರಾಮೀಣ ಶಿಕ್ಷಣದ ಸವಾಲುಗಳು ಮತ್ತು ಸಾಧ್ಯತೆಗಳನ್ನು ಅರ್ಥಮಾಡಿಕೊಳ್ಳಲು ಈ ಅಧ್ಯಯನವು ಮಾರ್ಗದರ್ಶಿಯಾಗಿದೆ. ಸಂಶೋಧಕರಿಗೆ, ಭವಿಷ್ಯದ ಸಂಶೋಧನೆಗಳಿಗೆ ಈ ಅಧ್ಯಯನವು ಆಧಾರ ಗ್ರಂಥವಾಗಿ ಕಾರ್ಯನಿರ್ವಹಿಸುತ್ತದೆ. ಸಮಾಜ ಸೇವಕರಿಗೆ, ಗ್ರಾಮೀಣ ಮಹಿಳಾ ಸಬಲೀಕರಣಕ್ಕಾಗಿ ಕಾರ್ಯನಿರ್ವಹಿಸುವ ಸಂಸ್ಥೆಗಳಿಗೆ ಇದು ಮಾರ್ಗದರ್ಶಿಯಾಗಿದೆ. ಅಂತರಾಷ್ಟ್ರೀಯ ಸಂಸ್ಥೆಗಳಾದ ಯುನೆಸ್ಕೋ, ಯುನಿಸೆಫ್ ಮುಂತಾದವುಗಳಿಗೆ ಭಾರತದ ಗ್ರಾಮೀಣ ಮಹಿಳಾ ಶಿಕ್ಷಣದ ಸ್ಥಿತಿಗತಿಯನ್ನು ಅರ್ಥಮಾಡಿಕೊಳ್ಳಲು ಈ ಅಧ್ಯಯನವು ಸಹಾಯಕವಾಗಿದೆ.

## 6. ಅಧ್ಯಯನದ ಉದ್ದೇಶಗಳು (Objectives of the Study)

1. ಗ್ರಾಮೀಣ ಮಹಿಳೆಯರ ಶೈಕ್ಷಣಿಕ ಸ್ಥಿತಿಗತಿ ಮತ್ತು ಅವರ ಶಿಕ್ಷಣಕ್ಕೆ ಅಡ್ಡಿಯಾಗಿರುವ ಸಾಮಾಜಿಕ–ಆರ್ಥಿಕ ಅಡೆತಡೆಗಳನ್ನು ಗುರುತಿಸುವುದು.
2. ಮಹಿಳಾ ಸಬಲೀಕರಣಕ್ಕಾಗಿ ಜಾರಿಯಲ್ಲಿರುವ ಸರ್ಕಾರಿ ಯೋಜನೆಗಳ ಪರಿಣಾಮಕಾರಿತ್ವ ಮತ್ತು ಶಿಕ್ಷಣದ ಪಾತ್ರವನ್ನು ವಿಶ್ಲೇಷಿಸುವುದು.
3. ಗ್ರಾಮೀಣ ಮಹಿಳಾ ಶಿಕ್ಷಣದ ಪ್ರಗತಿಗೆ ಸೂಕ್ತ ಶಿಫಾರಸುಗಳನ್ನು ಮಂಡಿಸುವುದು.

## 7. ಸಂಶೋಧನಾ ವಿಧಾನ (Methodology)

ಈ ಅಧ್ಯಯನವು ಗ್ರಂಥಾಲಯ ಆಧಾರಿತ ವಿಮರ್ಶಾತ್ಮಕ ಸಂಶೋಧನೆಯಾಗಿದ್ದು, ದ್ವಿತೀಯಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಪ್ರಾಥಮಿಕ ಮಾಹಿತಿ ಸಂಗ್ರಹಣೆಯನ್ನು ನಡೆಸದೆ, ಈಗಾಗಲೇ ಪ್ರಕಟವಾದ ಅಧ್ಯಯನಗಳು, ಸರ್ಕಾರಿ ವರದಿಗಳು ಮತ್ತು ದಾಖಲೆಗಳನ್ನು ಆಧರಿಸಿ ಈ ಸಂಶೋಧನಾ ಲೇಖನವನ್ನು ಸಿದ್ದಪಡಿಸಲಾಗಿದೆ. ಈ ವಿಮರ್ಶಾ ಲೇಖನಕ್ಕಾಗಿ ವ್ಯವಸ್ಥಿತ ವಿಮರ್ಶಾ ವಿಧಾನವನ್ನು ಅನುಸರಿಸಲಾಗಿದ್ದು ಇದು ಸಂಶೋಧನಾ ಪ್ರಶ್ನೆಗಳ ಗುರುತಿಸುವಿಕೆ, ಸಂಬಂಧಿತ ಅಧ್ಯಯನಗಳ ಹುಡುಕಾಟ, ಗುಣಮಟ್ಟ ಮೌಲ್ಯಮಾಪನ, ಮಾಹಿತಿ ಸಂಶ್ಲೇಷಣೆ ಮತ್ತು ತೀರ್ಮಾನಗಳ ನಿರೂಪಣೆಯನ್ನು ಒಳಗೊಂಡ ಪಾರದರ್ಶಕ ಪ್ರಕ್ರಿಯೆಯಾಗಿದೆ.

## 8. ವಿಮರ್ಶೆಯ ಪ್ರಕಾರಗಳು (Types of Review)

ಈ ಅಧ್ಯಯನದಲ್ಲಿ ಮೂರು ಪ್ರಮುಖ ವಿಮರ್ಶಾ ಪ್ರಕಾರಗಳನ್ನು ಬಳಸಿಕೊಳ್ಳಲಾಗಿದೆ. ವಿವರಣಾತ್ಮಕ ವಿಮರ್ಶೆಯ ಮೂಲಕ ಗ್ರಾಮೀಣ ಮಹಿಳಾ ಶಿಕ್ಷಣದ ಪ್ರಸ್ತುತ ಸ್ಥಿತಿಗತಿಯ ಸಮಗ್ರ ಚಿತ್ರಣವನ್ನು ಒದಗಿಸಲಾಗಿದೆ. ಈ ವಿಮರ್ಶೆಯು ಗ್ರಾಮೀಣ ಮಹಿಳೆಯರ ಶೈಕ್ಷಣಿಕ ಸ್ಥಿತಿ, ಸಾಕ್ಷರತಾ ಪ್ರಮಾಣ ಮತ್ತು ಶಿಕ್ಷಣದ ವ್ಯಾಪ್ತಿಯನ್ನು ವಿವರಿಸುತ್ತದೆ. ವಿಮರ್ಶಾತ್ಮಕ ವಿಮರ್ಶೆಯು ಅಸ್ತಿತ್ವದಲ್ಲಿರುವ ಅಧ್ಯಯನಗಳ ಸಾಮರ್ಥ್ಯ ಮತ್ತು ಮಿತಿಗಳನ್ನು ಗುರುತಿಸಲು ಸಹಾಯ ಮಾಡಿದೆ. ಇದು ವಿವಿಧ ಸಂಶೋಧನಾ ಅಧ್ಯಯನಗಳ ವೈಜ್ಞಾನಿಕ ಮೌಲ್ಯಮಾಪನವನ್ನು ಒದಗಿಸುತ್ತದೆ. ಸಮಗ್ರ ವಿಮರ್ಶೆಯು ಗ್ರಾಮೀಣ ಮಹಿಳಾ ಶಿಕ್ಷಣದ ವಿವಿಧ ಆಯಾಮಗಳನ್ನು ಒಳಗೊಂಡ ಸಮಗ್ರ ದೃಷ್ಟಿಕೋನವನ್ನು ಒದಗಿಸಿದೆ.

## 9. ಸಂಶೋಧನಾ ಸಂಗತಿಗಳು ಮತ್ತು ಚರ್ಚೆ (Findings and Discussion)

- ಗ್ರಾಮೀಣ ಮಹಿಳಾ ಶಿಕ್ಷಣದ ಸ್ಥಿತಿಗತಿ

1. ಸಾಕ್ಷರತಾ ಪ್ರಮಾಣದ ಪ್ರಗತಿ: ಗ್ರಾಮೀಣ ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿ ಗಮನಾರ್ಹ ಪ್ರಗತಿಯಾಗಿದೆ. 2011ರ ಜನಗಣತಿಯಲ್ಲಿ 58.8% ಇದ್ದ ಪ್ರಮಾಣ, 2023ರ ರಾಷ್ಟ್ರೀಯ ಶೈಕ್ಷಣಿಕ ಸಮೀಕ್ಷೆಯ ಪ್ರಕಾರ ಸುಮಾರು 70% ಕ್ಕೆ ಏರಿದೆ. ಆದರೂ ಇದು ನಗರ ಮಹಿಳೆಯರ ಸಾಕ್ಷರತಾ ಪ್ರಮಾಣಕ್ಕೆ (ಶೇ. 87) ಹೋಲಿಸಿದರೆ ಕಡಿಮೆಯಿದೆ. ನಗರ–ಗ್ರಾಮೀಣ ಅಂತರವು ಸುಮಾರು ಶೇ. 17ರಷ್ಟಿದ್ದು, ಇದು ಇನ್ನೂ ಕಡಿಮೆಯಾಗಿಲ್ಲ.

2. ಪ್ರಾದೇಶಿಕ ಅಸಮಾನತೆ: ರಾಜಸ್ಥಾನ, ಬಿಹಾರ, ಮಧ್ಯಪ್ರದೇಶ, ಜಾರ್ಖಂಡ್, ಉತ್ತರ ಪ್ರದೇಶ, ಛತ್ತೀಸ್‌ಗಢ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಗ್ರಾಮೀಣ ಮಹಿಳಾ ಸಾಕ್ಷರತಾ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ (ಶೇ.70) ಗಣನೀಯವಾಗಿ ಕಡಿಮೆಯಿದೆ (ಶೇ. 50–65 ರ ನಡುವೆ) ಕೇರಳ (ಶೇ. 95), ತಮಿಳುನಾಡು (ಶೇ. 80), ಮಹಾರಾಷ್ಟ್ರ (ಶೇ. 78), ಹಿಮಾಚಲ ಪ್ರದೇಶ (ಶೇ. 89), ಪಂಜಾಬ್ (ಶೇ. 75), ಗೋವಾ (ಶೇ.85) ಮತ್ತು ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ (ದಕ್ಷಿಣ ಕನ್ನಡ, ಉಡುಪಿ–ಶೇ. 85ರ ಮೇಲೆ) ಇದು ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿದೆ.

3. ಪ್ರಾಥಮಿಕ ಶಿಕ್ಷಣದಲ್ಲಿ ಯಶಸ್ಸು: ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದೆ. ಸರ್ವ ಶಿಕ್ಷಾ ಅಭಿಯಾನ್, ಮಧ್ಯಾಹ್ನದ ಬಿಸಿಯೂಟ ಯೋಜನೆ, ಹೆಣ್ಣುಮಕ್ಕಳಿಗೆ ಉಚಿತ ಶಿಕ್ಷಣ, ವಿದ್ಯಾರ್ಥಿವೇತನ ಮತ್ತು ಸೈಕಲ್ ವಿತರಣೆಯಿಂದಾಗಿ ಬಹುತೇಕ ಎಲ್ಲಾ ಗ್ರಾಮೀಣ ಹೆಣ್ಣು ಮಕ್ಕಳು (6–14 ವರ್ಷ) ಪ್ರಾಥಮಿಕ ಶಾಲೆಗೆ ಸೇರುತ್ತಿದ್ದಾರೆ. ದಾಖಲಾತಿ ಪ್ರಮಾಣ ಶೇ. 45 ಕ್ಕಿಂತ ಹೆಚ್ಚಾಗಿದೆ.

4. ಪ್ರೌಢಶಿಕ್ಷಣದಲ್ಲಿ ಸಮಸ್ಯೆ: ಪ್ರೌಢಶಾಲೆ ಮತ್ತು ಕಾಲೇಜು ಮಟ್ಟಕ್ಕೆ ಬಂದಾಗ ಹೆಣ್ಣು ಮಕ್ಕಳ ದಾಖಲಾತಿ ಪ್ರಮಾಣ ಗಮನಾರ್ಹವಾಗಿ ಕಡಿಮೆಯಾಗುತ್ತದೆ. ಹದಿಹರೆಯದಲ್ಲಿ (15–18 ವರ್ಷ) ಹೆಣ್ಣು ಮಕ್ಕಳು ಶಾಲೆ ತ್ಯಜಿಸುವ ಪ್ರಮಾಣ ಹೆಚ್ಚಾಗಿದೆ. ಬಾಲ್ಯ ವಿವಾಹ, ಆರ್ಥಿಕ ಕಾರಣಗಳು, ಶಾಲೆಗಳ ದೂರ, ಪ್ರತ್ಯೇಕ ಶೌಚಾಲಯಗಳ ಕೊರತೆ, ಸುರಕ್ಷಿತ ಸಾರಿಗೆ ವ್ಯವಸ್ಥೆಯ ಕೊರತೆ, ಲಿಂಗ ತಾರತಮ್ಯ ಮತ್ತು ಸಾಂಪ್ರದಾಯಿಕ ಮನೋಭಾವ ಇದಕ್ಕೆ ಪ್ರಮುಖ ಕಾರಣಗಳಾಗಿವೆ. ಪ್ರೌಢಶಾಲಾ ಮಟ್ಟದಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಪ್ರಮಾಣ ಶೇ. 60–70 ರ ನಡುವೆ ಇದ್ದರೆ, ಕಾಲೇಜು ಮಟ್ಟದಲ್ಲಿ ಇದು ಇನ್ನೂ ಕಡಿಮೆಯಾಗಿದೆ.

- ಅಡೆತಡೆಗಳು ಮತ್ತು ಸವಾಲುಗಳು

1. ಬಡತನ ಮತ್ತು ಆರ್ಥಿಕ ಅಸಮಾನತೆ: ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದಾಗಿ ಅನೇಕ ಗ್ರಾಮೀಣ ಕುಟುಂಬಗಳಲ್ಲಿ ಮಗಳ ಶಿಕ್ಷಣಕ್ಕಿಂತ ಮಗನ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಸಿಗುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವ ಬದಲು ಮನೆಕೆಲಸಗಳಿಗೆ ಅಥವಾ ಕೂಲಿ ಕೆಲಸಗಳಿಗೆ ಬಳಸಿಕೊಳ್ಳಲಾಗುತ್ತದೆ.

2. ಬಾಲ್ಯ ವಿವಾಹದಂತಹ ಸಾಮಾಜಿಕ ಪದ್ಧತಿಗಳು: ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ಬಾಲ್ಯ ವಿವಾಹ ಪದ್ಧತಿ ಇನ್ನೂ ಅಸ್ತಿತ್ವದಲ್ಲಿದೆ. ಕಡಿಮೆ ವಯಸ್ಸಿನಲ್ಲಿಯೇ ಹೆಣ್ಣು ಮಕ್ಕಳ ವಿವಾಹವಾದಾಗ ಅವರ ಶಿಕ್ಷಣವು ಮಧ್ಯದಲ್ಲಿಯೇ ನಿಂತುಹೋಗುತ್ತದೆ. ಕಾನೂನುಬಾಹಿರವಾಗಿದ್ದರೂ ಇದು ಇನ್ನೂ ಪ್ರಚಲಿತದಲ್ಲಿದೆ.

3. ಶಾಲೆಗಳ ಕೊರತೆ ಮತ್ತು ಮೂಲಸೌಕರ್ಯಗಳ ಅಭಾವ: ಅನೇಕ ಗ್ರಾಮಗಳಲ್ಲಿ ಪ್ರೌಢಶಾಲೆಗಳು ಮತ್ತು ಕಾಲೇಜುಗಳು ದೂರದಲ್ಲಿವೆ. ಶಾಲೆಗಳಲ್ಲಿ ಪ್ರತ್ಯೇಕ ಶೌಚಾಲಯಗಳ ಕೊರತೆ, ಕುಡಿಯುವ ನೀರು, ಗ್ರಂಥಾಲಯ, ಪ್ರಯೋಗಾಲಯದ ಅಭಾವವೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗಿದೆ.

4. ಲಿಂಗ ತಾರತಮ್ಯ ಮತ್ತು ಸಾಂಪ್ರದಾಯಿಕ ಮನೋಭಾವ: 'ಹೆಣ್ಣು ಮಕ್ಕಳು ಅಡುಗೆ ಮನೆಗೆ ಮಾತ್ರ' ಎಂಬ ಸಂಕುಚಿತ ಮನೋಭಾವ ದೊಡ್ಡ ತಡೆಗೋಡೆಯಾಗಿದೆ. ಹೆಣ್ಣು ಮಕ್ಕಳಿಗೆ ಹೆಚ್ಚು ಓದಿಸಿದರೆ ಗಂಡು ಸಿಗುವುದಿಲ್ಲ ಎಂಬ ನಂಬಿಕೆಯೂ ಅನೇಕ ಕಡೆ ಇದೆ.

5. ಸುರಕ್ಷಿತ ಸಾರಿಗೆ ವ್ಯವಸ್ಥೆಯ ಕೊರತೆ: ಶಾಲೆಗಳು ದೂರದಲ್ಲಿರುವಾಗ ಸುರಕ್ಷಿತ ಸಾರಿಗೆ ವ್ಯವಸ್ಥೆಯ ಕೊರತೆಯು ಹೆಣ್ಣು ಮಕ್ಕಳ ಸುರಕ್ಷತೆಯ ಬಗ್ಗೆ ಪೋಷಕರಲ್ಲಿ ಕಳವಳ ಮೂಡಿಸಿ ಅವರನ್ನು ಶಾಲೆಗೆ ಕಳುಹಿಸದಂತೆ ತಡೆಯುತ್ತದೆ.

6. ಗುಣಮಟ್ಟದ ಶಿಕ್ಷಣದ ಕೊರತೆ: ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಬೋಧನೆಯ ಕೊರತೆ, ತರಬೇತಿ ಪಡೆದ ಶಿಕ್ಷಕರ ಅಭಾವ, ಶಿಕ್ಷಕರ ಅನುಪಸ್ಥಿತಿ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಅವಕಾಶವಿಲ್ಲದಿರುವುದು ವಿದ್ಯಾರ್ಥಿಗಳ ಆಸಕ್ತಿಯನ್ನು ಕುಗ್ಗಿಸುತ್ತದೆ.

## 10. ತೀರ್ಮಾನ (Conclusion)

ಗ್ರಾಮೀಣ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಸಾಮಾಜಿಕ ನ್ಯಾಯವನ್ನು ಒಳಗೊಂಡ ಸಮಗ್ರ ವಿಧಾನದ ಅಗತ್ಯವಿದೆ. ಗ್ರಾಮೀಣ ಮಹಿಳೆಯರ ಶಿಕ್ಷಣವು ಕೇವಲ ಸರ್ಕಾರದ ಜವಾಬ್ದಾರಿಯಾಗಿರದೆ, ಸಮಾಜದ ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಆಗಿದೆ. ಗ್ರಾಮೀಣ ಮಹಿಳೆಯರು ಶಿಕ್ಷಿತರಾದಾಗ, ಅವರು ಕೇವಲ ತಮ್ಮ ವೈಯಕ್ತಿಕ ಜೀವನವನ್ನೇ ಅಲ್ಲ, ತಮ್ಮ ಕುಟುಂಬ, ಸಮಾಜ ಮತ್ತು ರಾಷ್ಟ್ರದ ಪ್ರಗತಿಗೂ ಕೊಡುಗೆ ನೀಡುತ್ತಾರೆ. ಸಬಲ ಮಹಿಳೆ, ಸಬಲ ರಾಷ್ಟ್ರ ಎಂಬುದು ಇಂದಿನ ಅಗತ್ಯವಾಗಿದೆ.

## 11. ಭವಿಷ್ಯದ ಸಂಶೋಧನೆಗೆ ಸಲಹೆಗಳು (Suggestions for Future Research)

1. ಶಿಕ್ಷಣ ಮತ್ತು ಆರ್ಥಿಕ ಅಭಿವೃದ್ಧಿ ಸಂಬಂಧ: ಗ್ರಾಮೀಣ ಮಹಿಳಾ ಶಿಕ್ಷಣ ಮತ್ತು ಆರ್ಥಿಕ ಅಭಿವೃದ್ಧಿಯ ನಡುವಿನ ಸಂಬಂಧದ ಕುರಿತು ಪ್ರಾಯೋಗಿಕ ಅಧ್ಯಯನಗಳ ಅಗತ್ಯವಿದೆ. ಪ್ರಾಥಮಿಕ ಮಾಹಿತಿ ಸಂಗ್ರಹಣೆಯ ಆಧಾರದ ಮೇಲೆ ಶಿಕ್ಷಣ ಮತ್ತು ಕುಟುಂಬದ ಆರ್ಥಿಕ ಸ್ಥಿತಿಯ ನಡುವಿನ ಸಂಬಂಧವನ್ನು ಅಧ್ಯಯನ ಮಾಡಬೇಕಾಗಿದೆ.

2. ತುಲನಾತ್ಮಕ ಅಧ್ಯಯನ: ವಿವಿಧ ರಾಜ್ಯಗಳ ಗ್ರಾಮೀಣ ಮಹಿಳಾ ಶಿಕ್ಷಣದ ತುಲನಾತ್ಮಕ ಅಧ್ಯಯನದ ಅವಶ್ಯಕತೆಯಿದೆ. ಯಶಸ್ವಿ ಮತ್ತು ಹಿಂದುಳಿದ ರಾಜ್ಯಗಳ ನಡುವಿನ ಹೋಲಿಕೆಯಿಂದ ಪರಿಣಾಮಕಾರಿ ಕಾರ್ಯತಂತ್ರಗಳನ್ನು ಗುರುತಿಸಬಹುದು.

3. ತಂತ್ರಜ್ಞಾನದ ಪ್ರಭಾವ: ಡಿಜಿಟಲ್ ಶಿಕ್ಷಣ, ಆನ್‌ಲೈನ್ ತರಗತಿಗಳು ಮತ್ತು ಇ–ಲರ್ನಿಂಗ್ ಗ್ರಾಮೀಣ ಮಹಿಳಾ ಶಿಕ್ಷಣದ ಮೇಲೆ ಬೀರುವ ಪ್ರಭಾವದ ಕುರಿತು ಆಳವಾದ ಅಧ್ಯಯನಗಳು ಅಗತ್ಯವಿದೆ.

4. ವಿಶೇಷ ವರ್ಗಗಳ ಅಧ್ಯಯನ: ಅಲ್ಪಸಂಖ್ಯಾತ, ಪರಿಶಿಷ್ಟ ಜಾತಿ ಮತ್ತು ಪಂಗಡದ ಗ್ರಾಮೀಣ ಮಹಿಳೆಯರ ಶಿಕ್ಷಣದ ಸ್ಥಿತಿಗತಿಯ ಕುರಿತು ವಿಶೇಷ ಅಧ್ಯಯನಗಳ ಅಗತ್ಯವಿದೆ. ಈ ವರ್ಗಗಳ ವಿಶಿಷ್ಟ ಸಮಸ್ಯೆಗಳನ್ನು ಗುರುತಿಸಬೇಕಾಗಿದೆ.

5. ಸ್ವಸಹಾಯ ಸಂಘಗಳ ಪಾತ್ರ: ಸ್ವಸಹಾಯ ಸಂಘಗಳು ಗ್ರಾಮೀಣ ಮಹಿಳೆಯರ ಶಿಕ್ಷಣ ಮತ್ತು ಸಬಲೀಕರಣದ ಮೇಲೆ ಬೀರುವ ಪ್ರಭಾವದ ಕುರಿತು ಪ್ರಾಯೋಗಿಕ ಅಧ್ಯಯನಗಳು ಅಗತ್ಯವಿದೆ.

6. ಶಿಕ್ಷಣ ಮತ್ತು ಆರೋಗ್ಯ ಸಂಬಂಧ: ವಿದ್ಯಾವಂತ ಮಹಿಳೆಯರ ಆರೋಗ್ಯ ಸ್ಥಿತಿ ಮತ್ತು ಅವರ ಕುಟುಂಬದ ಆರೋಗ್ಯದ ಮೇಲೆ ಶಿಕ್ಷಣದ ಪ್ರಭಾವದ ಕುರಿತು ಅಧ್ಯಯನಗಳು ಅಗತ್ಯವಿದೆ.

7. ರಾಜಕೀಯ ಸಬಲೀಕರಣ: ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಮತ್ತು ನಾಯಕತ್ವದ ಮೇಲೆ ಶಿಕ್ಷಣದ ಪ್ರಭಾವದ ಕುರಿತು ಆಳವಾದ ಅಧ್ಯಯನಗಳು ಅಗತ್ಯವಿದೆ.

## 12. ಉಲ್ಲೇಖಗಳು: (References)


1. *ಆಗರ್ವಾಲ್, ಬಿ. (2014). ಭಾರತದಲ್ಲಿ ಮಹಿಳಾ ಶಿಕ್ಷಣ: ಸವಾಲುಗಳು ಮತ್ತು ಸಾಧ್ಯತೆಗಳು. ನವದೆಹಲಿ: ವಿಕಾಸ್ ಪಬ್ಲಿಷಿಂಗ್ ಹೌಸ್,*
2. *ದ್ರೆಜೆ, ಜೆ. & ಮುರ್ಥಿ, ಎಂ. (2001), ಗ್ರಾಮೀಣ ಭಾರತದಲ್ಲಿ ಶಿಕ್ಷಣ ಮತ್ತು ಅಭಿವೃದ್ಧಿ. ದೆಹಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.*
3. *ನಿರ್ಮಲಾ ರಾವ್. (2008), ಮಹಿಳಾ ಸಬಲೀಕರಣ: ಸಿದ್ಧಾಂತ ಮತ್ತು ಪ್ರಯೋಗ ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.*
4. *ಸೇನ್, ಎ. (1999). ಅಭಿವೃದ್ಧಿಯಾಗಿ ಸ್ವಾತಂತ್ರ್ಯ. ಆಕ್ಸ್‌ಫರ್ಡ್: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.*
5. *ಭಾರತ ಸರ್ಕಾರ, (2023), ರಾಷ್ಟ್ರೀಯ ಶೈಕ್ಷಣಿಕ ಸಮೀಕ್ಷೆ. ನವದೆಹಲಿ: ಶಿಕ್ಷಣ ಸಚಿವಾಲಯ.*
6. *ಯುನೆಸ್ಕೋ. (9099), ಗ್ಲೋಬಲ್ ಎಜುಕೇಷನ್ ಮಾನಿಟರಿಂಗ್ ರಿಪೋರ್ಟ್, ಪ್ಯಾರಿಸ್. ಯುನೆಸ್ಕೋ.*
7. *ಶಶಿಕಲಾ ಎಂ. (2019), "ಗ್ರಾಮೀಣ ಕರ್ನಾಟಕದಲ್ಲಿ ಮಹಿಳಾ ಸಾಕ್ಷರತೆ: ಒಂದು ಅಧ್ಯಯನ" ಕರ್ನಾಟಕ ಜರ್ನಲ್ ಆಫ್ ಸೋಷಿಯಲ್ ಸೈನ್ಸಸ್, 12(2), 45–62.*
8. *ಪಾಟೀಲ್, ವಿ. (2021). "ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣ: ಗ್ರಾಮೀಣ ಮಹಾರಾಷ್ಟ್ರದ ಅಧ್ಯಯನ", ಇಂಡಿಯನ್ ಜರ್ನಲ್ ಆಫ್ ಜೆಂಡರ್ ಸ್ಟಡೀಸ್, 28(3), 78–95.*
9. *ಭಾರತ ಸರ್ಕಾರ. (2011). ಜನಗಣತಿ: ನವದೆಹಲಿ: ಗೃಹ ಸಚಿವಾಲಯ.*
10. *ರಾಷ್ಟ್ರೀಯ ನಮೂನಾ ಸರ್ವೇಕ್ಷಣ ಸಂಸ್ಥೆ. (2020). ಶಿಕ್ಷಣದ ಸ್ಥಿತಿಗತಿ ಕುರಿತ ಸಮೀಕ್ಷೆ ನವದೆಹಲಿ: ಸಂಖ್ಯಾಶಾಸ್ತ್ರ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ.*